(ಸಾಕ್ಷಿದಾರರನ್ನು ಇಂದುಃ 03-11-2016 ರಂದು ಪುನಃ  ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲು ಃ-  ವಾದಿ ಪರ ವಕೀಲರಿಂದ ಶ್ರೀ ಎಸ್ ಪಿ ಆರ್ ವಕೀಲರಿಂದ ಃ-

ನಾನು 10ನೇ ತರಗತಿವರೆಗೆ ಕನ್ನಡದಲ್ಲಿ ವ್ಯಾಸಂಗ ಮಾಡಿದ್ದೇನೆ. ಹುಸೇನ ರವರಿಗೆ 3 ಗಂಡು ಮತ್ತು 3 ಹೆಣ್ಣು ಮಕ್ಕಳೆಂದರೆ ಸರಿ. ಹುಸೇನರವರ ಹೆಂಡತಿ 1ನೇ ಪ್ರತಿವಾದಿಯೂಗಿದ್ದಾರೆಂದರೆ ಸರಿ. ಹುಸೇನ ರವರ 2ನೇ ಮಗ ಸೈಯ್ಯದ ಪಟೇಲ ಈತನು ವಾದಿಯ ಗಂಡ ಎಂದರೆ ಸರಿ. 2ನೇ ವಾದಿ ಸೈಯದ ಪಟೇಲನ ಮಗಳು ಎಂದರೆ ನನಗೆ ಗೊತ್ತಿಲ್ಲ. ಹುಲಸಗೂಡಿನಲ್ಲಿ ನನ್ನ ತಾಯಿ ಮತ್ತು ನನ್ನ ತಮ್ಮ ಲಾಲ ಪಟೇಲ ಇರುತ್ತಾರೆ. ನಾನು 20 ವರ್ಷಗಳಿಂದ ಗುಲಬರ್ಗಾದಲ್ಲಿ ನೆಲೆಸಿದ್ದೇನೆ. ಸೈಯದ ಪಟೇಲ ಹುಲಸಗೂಡಿನಲ್ಲಿ ವಾಸವಾಗಿದ್ದಾನೆ. ಆತ ತನ್ನ ಹೆಂಡತಿ ಜೊತೆ ವಾಸವಾಗಿದ್ದಾನೆಂದರೆ ಸರಿ. ಸ.ನಂ.45/ಎ, ಸ.ನಂ.17/1, ಸ.ನಂ.16/2 ಮತ್ತು ಒಂದು ಮನೆ ಹಿರಿಯರಿಂದ ಬಂದ ಆಸ್ತಿ ಎಂದರೆ ಸರಿ. ಹುಸೇನರವರ ವಾರಸುದಾರರು 3 ಗಂಡು ಮಕ್ಕಳು 3 ಹೆಣ್ಣು ಮಕ್ಕಳು ಮತ್ತು ನಿಮ್ಮ ತಾಯಿ ಎಂದರೆ ಸರಿ. ನಿಮ್ಮ ತಂದೆ ಜೀವಿತ ಕಾಲದಲ್ಲಿ ಯಾವುದೇ ವಿಭಾಗವನ್ನು ಮಾಡದೇ ತೀರಿಕೊಂಡಿದ್ದಾರೆಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡಿರುವ ದಿನಾಂಕ, ತಿಂಗಳು, ಇಸ್ವಿ ಗೊತ್ತಿಲ್ಲ. ನಿಮ್ಮ ತಂದೆ ತೀರಿಕೊಂಡಿರುವ ಸಂಬಂಧ ತೋರಿಸಲು ಯೂವುದೇ ದಾಖಲೆ ಹಾಜರುಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದಿದ್ದಾರೆ. ನಿಮ್ಮ ತಂದೆಯವರು ತೀರಿಕೊಂಡ ನಂತರ ಪ್ರತಿವಾಗಿ 1 ರಿಂದ 3 ರವರ ಹೆಸರಿಗೆ ಪಹಣಿ ಪತ್ರಿಕೆ ವರ್ಗಾವಣೆಯಾಗಿದೆ ಎಂದರೆ ಸಾಕ್ಷಿ ನಮ್ಮ ತಂದೆ ಇರುವಾಗಲೇ ಬದಲಾಯಿಸಿದ್ದಾರೆ ಎಂದಿದ್ದಾರೆ.

ಪಹಣಿ ಪತ್ರಿಕೆ 2007 ರಲ್ಲಿ ವರ್ಗಾವಣೆಯಾಗಿದ್ದು ಅದರ ದಿನಾಂಕ, ತಿಂಗಳು ಗೊತ್ತಿಲ್ಲ. ಆರ್ ಟಿ ಸಿ ಬದಲಾವಣೆ ಮಾಡುವ ಪೂರ್ವದಲ್ಲಿ ನಿಮ್ಮ ತಂದೆಯವರು ಮಾಡಿಕೊಟ್ಟಿದ್ದಾರೆಂದು ಹೇಳುವ ವಿಭಾಗ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದಿದ್ದಾರೆ. ವಿಭಾಗ ಪತ್ರ ನೋಂದಣಿ ಪತ್ರವಾಗಿದೆ. ನಿಮ್ಮ ತಂದೆಯ ಆಸ್ತಿಯಲ್ಲಿ ಎಲ್ಲಾ ಮಕ್ಕಳಿಗೆ ಸಮನಾದ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ ಎಂದಿದ್ದಾರೆ. ನಮ್ಮ ತಂದೆ ಸೈಯದ ಪಟೇಲರವರಿಗೆ ಆಸ್ತಿಯನ್ನು ಕೊಟ್ಟಿದ್ದಾರೆ ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ಸೈಯದ ಪಟೇಲ ರವರಿಗೆ ಆಸ್ತಿ ಬಂದ ಬಗ್ಗೆ ತಹಸಿಲ್ದಾರರವರ ಮುಟೇಷನ್ ಆದೇಶ ಹಾಜರುಪಡಿಸಿದ್ದೇನೆ. ಸೈಯದ ಪಟೇಲ ರವರಿಗೆ ಸ.ನಂ. 17, 16 ರಲ್ಲಿ ಪಾಲು ಕೊಟ್ಟಿದ್ದೇವೆ. ಆರ್ ಟಿ ಸಿ ಸೈಯದ ಪಟೇಲ ರವರ ಹೆಸರಿನಲ್ಲಿ ನಮೂದಿಲ್ಲ ಆದರೆ ಆತನ ಹೆಂಡತಿಯಾದ ಖುರ್ಷಿದಾ ಬೇಗಂ ಹೆಸರಿನಲ್ಲಿ ನಮೂದಿದೆ. ಖುರ್ಷಿದಾ ಬೇಗಂ ಯಾವ ಊರಿನವರು ನನಗೆ ನೆನಪಿಲ್ಲ. ಸೈಯದ ಪಟೇಲ ಖುರ್ಷಿದಾ ಬೇಗಂ ಜೊತೆ ಅನೈತಿಕ ಸಂಬಂಧ ಹೊಂದಿದ್ದ ಎಂದರೆ ಸರಿಯಲ್ಲ. ವಾದಿಯ ಜೊತೆ ಮದುವೆ ಊರ್ಜಿತವಾಗಿರುವ ಸಂದರ್ಭದಲ್ಲಿ ಸೈಯದ ಪಟೇಲ ಖುರ್ಷಿದಾ ಬೇಗಂ ಜೊತೆ ಅನೈತಿಕ ಸಂಬಂಧ ಹೊಂದಿ ನಂತರ ಮದುವೆ ಮಾಡಿಕೊಂಡಿದ್ದಾನೆಂದರೆ ಸರಿಯಲ್ಲ. ಸೈಯದ ಪಟೇಲ ಮತ್ತು ಖುರ್ಷಿದಾ ಬೇಗಂ ಯಾವ ದಿನ ಮದುವೆ ಮಾಡಿಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ಸೈಯದ ಪಟೇಲ ಜೊತೆ ಖುರ್ಷಿದಾ ಬೇಗಂ ಎಷ್ಟು ವರ್ಷಗಳವರೆಗೆ ವಾಸವಾಗಿದ್ದಳು ಎಂದರೆ ನನಗೆ ಗೊತ್ತಿಲ್ಲ. ಖುರ್ಷಿದಾ ಬೇಗಂಗೆ ಒಂದು ಮಗು ಹುಟ್ಟಿ ಅದು ತೀರಿಕೊಂಡಿದೆ ಎಂದಿದ್ದಾರೆ. ಸೈಯದ ಪಟೇಲ ಖುರ್ಷಿದಾ ಬೇಗಂ ಮದುವೆ ಮಾಡಿಕೊಳ್ಳುವ ಸಂದರ್ಭದಲ್ಲಿ ಆಕೆಗೆ ಭದ್ರತೆಗಾಗಿ ಸ.ನಂ. 16 ಮತ್ತು 17 ರಲ್ಲಿ ಜಮೀನನ್ನು ಆಕೆಯ ಹೆಸರಿಗೆ ಮಾಡಿಕೊಟ್ಟಿದ್ದ ಎಂದರೆ ನನಗೆ ಗೊತ್ತಿಲ್ಲ. ಖುರ್ಷಿದಾ ಬೇಗಂ ಎಲ್ಲಿದ್ದಾಳೆ ಎಂದು ನನಗೆ ಗೊತ್ತಿಲ್ಲ. ಸೈಯದ ಪಟೇಲ ತೀರಿಕೊಂಡ ನಂತರ ಖುರ್ಷಿದಾ ಬೇಗಂ ಹೆಸರಿನಲ್ಲಿದ್ದ ಜಮೀನು ರಾಜೀ ಮಾತುಕತೆಯ ಮೂಲಕ ಲಾಲ ಪಟೇಲ ಹೆಸರಿಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಮ್ಮ ಸೈಯದ ಪಟೇಲ ನನ್ನ ತಂದೆ ತೀರಿಕೊಳ್ಳುವ ಪೂರ್ವದಲ್ಲಿಯೇ ಮೃತಪಟ್ಟಿದ್ದಾನೆ. ನಿಮ್ಮ ತಂದೆ ಯಾವುದೇ ವಾರಸುದಾರಿಕೆ ಪತ್ರ ಬರೆಯದೇ ಮೃತಪಟ್ಟಿದ್ದಾರೆಂದರೆ ಸರಿಯಲ್ಲ. ವಾದಿಗಳು ನಿಮ್ಮ ಬಳಿ 2013 ರಲ್ಲಿ ಪಾಲು ಕೊಡುವಂತೆ ಕೇಳಿದ್ದಾಳೆಂದರೆ ಸರಿಯಲ್ಲ. ಆಗ ನೀವು ಕೊಡಲು ಒಪ್ಪಿ ನಂತರದ ದಿನಗಳಲ್ಲಿ ನಿರಾಕರಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ಪಾಲು ಕೊಡಲು ನಿರಾಕರಿಸಿದ್ದರಿಂದ ಪಂಚಾಯತಿಯ ಮೂಲಕ ತಿಳುವಳಿಕೆ ನೀಡಿದ್ದರೂ ಸಹ ನೀವು ಯಾವುದೇ ಪಾಲು ಕೊಡದೇ ಇದ್ದರಿಂದ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದಾಳೆಂದರೆ ಸರಿಯಲ್ಲ. 1ನೇ ವಾದಿ ಮತ್ತು ನಿಮ್ಮ ತಮ್ಮ ಸೈಯದ ಪಟೇಲ ನಡುವೆ ಯಾವುದೇ ತಲಾಖ್ ನಾಮಾ ಆಗಿರುವುದಿಲ್ಲ ಎಂದರೆ ಸರಿಯಲ್ಲ. ತಲಾಖ್ ನಾಮಾ ಆಗಿರುವ ತಿಂಗಳು ದಿನಾಂಕ ವರ್ಷ ನನಗೆ ಗೊತ್ತಿಲ್ಲ. ಆ ತಲಾಖ್ ನಾಮಾ ಆಗಿರುವ ಸಂಬಂಧ ಯಾವುದೇ ದಾಖಲೆಗಳು ಇರುವ ಬಗ್ಗೆ ನನಗೆ ಗೊತ್ತಿಲ್ಲ. ತಲಾಖ್ ನಾಮಾ ಯಾರ ಎದುರಿನಲ್ಲಿ ಆಗಿದೆ ಅವರ ಹೆಸರು ನನಗೆ ಗೊತ್ತಿಲ್ಲ. ಯಾರ ಮುಂದೆ

ತಲಾಖ್ ನಾಮಾ ಆಗಿದೆ ಅವರನ್ನು ಸಾಕ್ಷಿ ವಿಚಾರಣೆ ಮಾಡಿಸಿಲ್ಲ ಎಂದರೆ ಸರಿ. ವಾದಿಗಳಿಗೆ ದಾವಾ ಆಸ್ತಿಗಳಲ್ಲಿ ಹಕ್ಕನ್ನು ತಪ್ಪಿಸುವ ಸಲುವಾಗಿ ನಿಮ್ಮ ತಾಯಿ ಮತ್ತು ಇತರ ಸಹೋದರರು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾಸ್ತಿಗಳಲ್ಲಿ ಭಾಗ ಕೊಡಬೇಕಾಗುತ್ತದೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾಸ್ತಿಗಳಲ್ಲಿ ವಾದಿಗಳಿಗೆ ಹಕ್ಕು ಇದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಚಿಂಚೋಳಿ